## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 16.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4 ರಿಂದ 6 ನೇ ಪ್ರತಿವಾದಿ ಪರ ಶ್ರೀ.ಎಸ್ ಬಿ ಡಿ ವಕೀಲರಿಂದಃ**

ನಾನು ಎಂಬಿಎ ಪದವಿಧರಳಾಗಿರುತ್ತೇನೆ. ನನ್ನ ಮೂಲ ಊರು ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ ತಾಲೂಕಿನ ಮಡಿಕೇಶ್ವರ ಗ್ರಾಮ ಆಗಿರುತ್ತದೆ. ನನ್ನ ತಾಯಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಜೀವಂತವಿದ್ದಾರೆ. ನಾವು ಒಟ್ಟು 5 ಜನ ಸಹೋದರಿಯರು. ನನ್ನ ಮದುವೆ ಮಾರ್ಚ 2017 ರಲ್ಲಿ ಆಗಿರುತ್ತದೆ. ನಾನು ಈಗ ನನ್ನ ಅತ್ತೆ ಮಾವ ಹಾಗೂ ಗಂಡನ ಜೊತೆ ನನ್ನ ಗಂಡನ ಮನೆಯಲ್ಲಿ ವಾಸವಿದ್ದೇನೆ. ಸಾಕ್ಷಿ ಮುಂದುವರೆದು ಅವರು ಮೊದಲನೆ ಮಹಡಿಯಲ್ಲಿದ್ದಾರೆ ನಾನು ನೆಲಮಹಡಿಯಲ್ಲಿದ್ದೇನೆ ಎಂದು ನುಡಿಯುತ್ತಾರೆ. ನಾನು ವಾಸವಿದ್ದ ಮನೆಯ ಜಾಗವನ್ನು ಪ್ರತಿವಾದಿ ನಂ.3 ಇವರೇ ಖರೀದಿಸಿರುತ್ತಾರೆ ಎಂದರೆ ಸರಿ. ಅದನ್ನು ನಮ್ಮ ಮದುವೆಯ ಮುಂಚೆ ಖರೀದಿಸಿರುತ್ತಾರೆ. ಮದುವೆಯಾದ ನಂತರ ಅವರು ಅಲ್ಲಿ ಕಟ್ಟಡ ಕಟ್ಟಲು ಪರವಾನಿಗೆ ಸಹ ಪಡೆದುಕೊಂಡಿರುತ್ತಾರೆ ಎಂದರೆ ಸರಿ. 2016-17 ರಲ್ಲಿ ಅವರು ಪರವಾನಿಗೆ ಪಡೆದುಕೊಂಡಿರುತ್ತಾರೆ. ಸಾಕ್ಷಿ ದಿಃ30/04/2016 ರ ಕಟ್ಟಡ ಪರವಾನಿಗೆ ಮಂಜೂರಾತಿ ಪತ್ರ ತೋರಿಸಿ ಅದನ್ನು ಪ್ರತಿವಾದಿ ನಂ.3 ಇವರ ಹೆಸರಿನಲ್ಲಿ ನೀಡಲಾಗಿದೆ ಎಂದರೆ ಸಾಕ್ಷಿ ಒಪ್ಪಿರುತ್ತಾರೆ. ಆದರೆ ಸದರಿ ದಾಖಲೆ ನಿಖರವಾಗಿ ಕಾಣದೇ ಇರುವ ಕಾರಣ ಅದನ್ನು ನಿಶಾನೆಯನ್ನಾಗಿ ಗುರುತಿಸಲು ನಿರಾಕರಿಸಲಾಯಿತು. ಆ ರೀತಿ ದಿಃ30/04/2016 ರಂದು ಪರವಾನಿಗೆ ಪಡೆದ ನಂತರ ಪ್ರತಿವಾದಿ ನಂ.3 ಇವರು ಒಂದು ವರ್ಷದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪರವಾನಿಗೆ 2016 ರಲ್ಲಿಯೇ ನೀಡಲಾಗಿದೆ ಹಾಗೂ ನಿಮ್ಮ ಮದುವೆ 2017 ರಲ್ಲಿ ಆಗಿದೆ ಆ ಬಗ್ಗೆ ನಿಮಗೆ ಹೇಗೆ ಗೊತ್ತು ಎಂದರೆ ಸಾಕ್ಷಿ ನಾನು ಹಾಗೂ ಪ್ರತಿವಾದಿ ನಂ.3 ಮುಂಚೆಯಿಂದಲೂ ಪರಿಚಯ ಹಾಗೂ ನಮ್ಮ ಮದುವೆಯಾದ ನಂತರ ಅವರು ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈಗಲೂ ಸಹ ಪ್ರತಿವಾದಿ ನಂ.3 ಬ್ಯಾಂಕಿನ ಸಾಲದ ಕಂತನ್ನು ತಮ್ಮ ಸಂಬಳದಿಂದ ಕಟ್ಟುತ್ತಿದ್ದಾರೆ ಎಂದರೆ ಸರಿ.

2. ಪ್ರತಿವಾದಿ ನಂ.4 ರಿಂದ 6 ರವರು ನನಗೆ ನಾದಿನಿಯರಾಗಬೇಕು. ನನ್ನ ಗಂಡನಿಗೆ ಮನೆ ಕಟ್ಟಲು ಹಣ ಕಡಿಮೆ ಬಿದ್ದಿತ್ತು ಎಂದು ಪ್ರತಿವಾದಿ ನಂ.4 ರಿಂದ 6 ರವರು ತಲಾ 3 ಲಕ್ಷವನ್ನು ಮನೆ ಕಟ್ಟಲು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಮನೆ ಕಟ್ಟುವ ಸಮಯದಲ್ಲಿ ಹಣ ಕಡಿಮೆ ಬಿದ್ದಿತ್ತು ಹಾಗೂ ಕಟ್ಟಡ ಕಾಮಗಾರಿ ಅರ್ಧದಲ್ಲಿ ನಿಂತು ಹೋಗಿತ್ತು ಹಾಗೂ ನನ್ನ ಗಂಡ ಪ್ರತಿವಾದಿ ನಂ.4 ರಿಂದ 6 ಇವರ ಕಡೆಯಿಂದ ತಲಾ 3 ಲಕ್ಷ ರೂ ಹಾಗೂ 4 ಲಕ್ಷ ಈ ರೀತಿ ಮೊತ್ತವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆ ಪೂರ್ವದಲ್ಲಿಯೇ ಪ್ರತಿವಾದಿ ನಂ.3 ಅವರ ಸಹೋದರಿಯರಿಂದ ಕಟ್ಟಡ ಕಟ್ಟಲು ಹಣ ಪಡೆದುಕೊಂಡಿರುತ್ತಾರೆ ಹಾಗೂ ನನಗೆ ಸದರಿ

ವಿಷಯ ಗೊತ್ತಿಲ್ಲದಿದ್ದರೂ ಸಹ ನಾನು ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮದುವೆ ಪೂರ್ವದಲ್ಲಿ ಆದ ಯಾವುದೇ ವಿಷಯ ಗೊತ್ತಿಲ್ಲ ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆಯ ಗೃಹ ಪ್ರವೇಶದ ಸಮಯದಲ್ಲಿ ನೀವು ಹಾಜರಿದ್ದಿರಾ ಎಂದರೆ ಸಾಕ್ಷಿ ನಾವೇ ಗೃಹ ಪ್ರವೇಶ ಮಾಡಿರುತ್ತೇವೆ ಹಾಗೂ ಸದರಿ ಸಮಯದಲ್ಲಿ ನಮ್ಮ ಅತ್ತೆ ಮಾವ ಇರಲಿಲ್ಲ ಎಂದು ನುಡಿಯುತ್ತಾರೆ. ಗೃಹ ಪ್ರವೇಶದ ಸಮಯದಲ್ಲಿ ಇನ್ನೂ ನನ್ನ ಮದುವೆಯಾಗಿರಲಿಲ್ಲ ಹಾಗೂ ಗೃಹ ಪ್ರವೇಶವನ್ನು ನನ್ನ ಗಂಡ ಹಾಗೂ ಅತ್ತೆ ಮಾವ ಮೂರು ಜನ ಸೇರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗೃಹ ಪ್ರವೇಶದ ಸಮಯದಲ್ಲಿ ಫೋಟೋ ಹಾಗೂ ವಿಡಿಯೋಗಳನ್ನು ಮಾಡಲಾಗುತ್ತದೆ ಎಂದರೆ ಸಾಕ್ಷಿ ವಿಡಿಯೋ ಮಾಡಿಸಿಲ್ಲ ಆದರೆ ಮೊಬೈಲ್ ನಲ್ಲಿ ತೆಗೆದ ಫೋಟೋಗಳು ಇವೆ ಎಂದು ನುಡಿಯುತ್ತಾರೆ. ಸದರಿ ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ. ಆದರೆ ಒಂದು ವಾರದಲ್ಲಿ ಹಾಜರಪಡಿಸುತ್ತೇನೆ. ಎಲ್ಲಾ ವಿಷಯ ಮದುವೆಯ ಮುಂಚೆ ಆಗಿದ್ದರೂ ಸಹ ಸದರಿ ವಿಷಯ ನಂತರ ಆಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಹಾಗೂ ನಾನು ದಾವಾ ಆಸ್ತಿಯಲ್ಲಿಯೇ ನಾವೆಲ್ಲ ವಾಸವಿದ್ದ ಕಾರಣ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.4 ರಿಂದ 6 ಇವರು ನನ್ನ ಗಂಡನಿಗೆ ನನ್ನ ಮದುವೆ ಪೂರ್ವದಲ್ಲಿಯೇ ಮನೆ ಕಟ್ಟಲು ಹಣ ನೀಡಿದ್ದರು ಹಾಗೂ ಆ ಬಗ್ಗೆ ನನಗೆ ಗೊತ್ತಿಲ್ಲ ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**